ಶ್ರೀ ಕೆ. ಎಂ. ಕೃಪ್ಪಾರೆಡ್ಡಿ (ರೇಷ್ಮೆ, ಪಶುಸಂಗೋಪನ, ಮೀನುಗಾರಿಕೆ ಸಚಿವರು).--

ಅ) ಎರಡು

೧) ಬೆಂಗಳೂರು ೨) ಬೀದರ್

ಆ) ೧) ಬೆಂಗಳೂರು ೭೫ (ಸರಾಸರಿ)

೨) ಬೀದರ್ : ಪ್ರಾರಂಭವಾಗಿ ೩½ ವರ್ಷಗಳಾಗಿರುವುದರಿಂದ ಇನ್ನೂ ಪದವೀಧರರು ಹೊರ ಬಂದಿಲ್ಲ.

ಇ) ೬೫೩

ಈ) ಬಂದಿದೆ. ಸಹಾಯಕ ಪಶುವೈದ್ಯರಿಗಳ ಹುದ್ದೆಗಳನ್ನು ಲೋಕಸೇವಾ ಆಯೋಗದ ಮೂಲಕ ತುಂಬೇಕಾಗಿರುವುದರಿಂದ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ.— ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಪಶುವೈದ್ಯಶಾಲೆಗಳಲ್ಲಿ ಸಿಬ್ಬಂದಿ ಅಭಾವ ಇರುವುದರಿಂದ ಈ ಕುರಿತು ತೀವ್ರಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಸಚಿವರನ್ನು ಕೇಳಂತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.— ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ ಸಂಖ್ಯೆ ೪೮೪ (೧೨೯೩) ಶ್ರೀ ಎಂ. ಶಿವಣ್ಣ

ಪ್ರಶ್ನೆ ಸಂಖ್ಯೆ ೫೮೫ (೧೨೫೨) ಶ್ರೀ ಗೋಪಾಲ ಮಂಕಂಂದ ಕಾನಡೆ

ಮಾನ್ಯ ಸದಸ್ಯರುಗಳು ಗೈರು ಹಾಜರಿ

ಬೆಳ್ತಂಗಡಿಯ ಹರಿಜನ ಕಾಲೋನಿಗಳ ವಿದ್ಯುದ್ದೀಕರಣ.

೧೨೫೪ (ಡಿ) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ (ಪುರಸಭೆ) ಮಂಡಲಿ ಪಂಚಾಯತಿ ಕ್ಷೇತ್ರದಲ್ಲಿ ಹರಿಜನ ಕಾಲೋನಿಯಲ್ಲಿ ದಾರಿ ದೀಪಗಳನ್ನು ಅಳವಡಿಸುವಂತೆ ೩ ವರ್ಷಗಳ ಹಿಂದೆ ನಗರ ಸಭೆಯಿಂದ ನಿರ್ಣಯ ಕೈಗೊಂಡರೂ ಇದನ್ನು ಕಾರ್ಯರೂಪಕ್ಕೆ ತರದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಹರಿಜನ ಕಾಲೋನಿಗೆ ಯಾವಾಗ ದಾರಿದೀಪಗಳ ಸೌಲಭ್ಯಗಳನ್ನು ಕಲ್ಪಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಬೆಳ್ತಂಗಡಿ ಪುರಸಭೆಯಿಂದ ಹರಿಜನ ಕಾಲೋನಿಗೆ ದಾರಿದೀಪ ಒದಗಿಸಲು ಬಂದ ಯಾವ ಮನವಿಯೂ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಬಾಕಿ ಉಳಿದಿಲ್ಲ.

ಆ) ಫಾರ್ಮಾಲಿಟೀಸ್ ಅನುಸರಿಸಿ ಮನವಿಯು ಬಂದ ಮೇಲೆ ಇದನ್ನು ಪರಿಶೀಲಿಸಲಾಗುವುದು.

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಯಾವ ಮನವಿಯೂ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಬಾಕಿ ಉಳಿದಿಲ್ಲವೆಂದೂ', ಎರಡನೆಯ ಪ್ರಶ್ನೆಗೆ ''ಪರಿಶೀಲಿಸಲಾಗುವುದು'' ಎಂದು ಉತ್ತರ ಕೊಟ್ಟಿದ್ದಾರೆ. ಸುಮಾರು ೩ ವರ್ಷದ ಹಿಂದೆ ಪುರಸಭೆಯಲ್ಲಿ ನಿರ್ಣಯ ಮಾಡಿ ವಿದ್ಯುತ್ ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಇವತ್ತಿನವರೆಗೂ ಅದು ಸಹ ಎಸ್ಟಿಮೇಟ್ ಆಗಿಲ್ಲ. ಈ ರೀತಿ ವರ್ಷಾನುಗಟ್ಟಲೆ ಎಸ್ಟಿಮೇಟ್ ಆಗದೇ ಇರುವುದು ಅಲ್ಲಿನ ಆಫೀಸಿನ ಕಾಗದಪತ್ರಗಳನ್ನು ತಾವು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಇವತ್ತೂ ತಾವು ಯಾವ ಮನವಿಯೂ ಬಾಕಿ ಇಲ್ಲ ಎಂದು ಹೇಳಿದ್ದೀರಿ.

ಇದೇರೀತಿ ಅನೇಕ ವರ್ಷಗಳಿಂದ ಪಂಪುಸೆಟ್ಟುಗಳಿಗೂ ಪವರ್ ಕೊಟ್ಟಿಲ್ಲ. ಅನೇಕ ಜನ ಈಗ್ಗೆ ೩-೪ ವರ್ಷಗಳ ಹಿಂದೆಯೇ ಪಂಪುಸೆಟ್ಟುಗಳನ್ನು ಖರೀದಿ ಮಾಡಿದ್ದಾರೆ. ಈ ರೀತಿ ಎಸ್ಟಿಮೇಟ್ ಮಾಡದೇ ಇರುವಂಥ ಸಾವಿರಾರು ಅರ್ಜಿಗಳು ಇವೆ. ಈ ರೀತಿ ಮಾಡಿರುವ ಅಧಿಕಾರಿಗಳು ಬಸವಣ್ಣಪ್ಪ ಎಂದರು. ಇವರು ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ. ಅಲ್ಲಿ ರಾಶಿಗಟ್ಟಲೆ ಅರ್ಜಿಗಳೂ, ಫೈಲುಗಳು ವರ್ಷಾನುಗಟ್ಟಲೆ ಬಿದ್ದಿವೆ. ತಾವು ಪರಿಶೀಲಿಸಲಾಗುವುದು ಎಂದು ಹೇಳುತ್ತಿದ್ದೀರಿ. ದಯವಿಟ್ಟು ಏನು ಕ್ರಮ ಕೈಗೊಳ್ಳುತ್ತೀರಿ ಎಂದು ತಾವು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಸ್ಪೆಸಿಫಿಕ್ ಆಗಿ, ನಿರ್ದಿಷ್ಟವಾಗಿ ಅಧಿಕಾರಿಯ ಕಾರಣ ಇದ್ದರೆ, ಆ ಅಧಿಕಾರಿಯಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ, ಇದು ಬೋರ್ಡ್ ಗಮನಕ್ಕೆ ಬಂದಿಲ್ಲ ಎನ್ನುವುದಂತೂ ನಿಜ. ಮೂರು ವರ್ಷದ ಹಿಂದೆ ಮುನಿಸಿಪಾಲಿಟಿಯವರು ರೆಸುಲ್ಯೂಷನ್ ಮಾಡಿ ಕಳುಹಿಸಿದ್ದರೂ, ಆದಕ್ಕೆ ಕೆ.ಇ.ಬಿ. ಆಫೀಸಿನಲ್ಲಿ ಕಲವೊಂದು ಪ್ರೊಸೀಜರ್ ಇದೆ. ಅದಕ್ಕೆ ಬೇಕಾದಂಥ ಖರ್ಚಿನ್ನು ಕೆಲವು ವೇಳೆ ಸಂಬಂಧಪಟ್ಟವರೇ ವಹಿಸಬೇಕಾಗುತ್ತದೆ. ಇದು ಪುರಸಭೆ ಆಗಿರುವುದರಿಂದ, ಪುರಸಭೆಯಲ್ಲಿ ಏನೋ ತಪ್ಪಾಗಿರಬಹುದು. ನಿರ್ದಿಷ್ಟವಾದ ಕಾರಣ ತೋರಿಸಿ ಬರೆದರೆ ನಾನು ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ವಸಂತ ಬಂಗೇರ.—ಪುರಸಭೆಯ ಒಬ್ಬ ಸದಸ್ಯರು ಆಫೀಸರನ್ನು ಕರೆದುಕೊಂಡು ಹೋಗಿ, ಎಲ್ಲಾ ವ್ಯವಸ್ಥೆಯನ್ನು ತೋರಿಸಿದ್ದಾರೆ, ಮೂರು ವರ್ಷಗಳಿಂದ ಎಸ್ಟಿಮೇಟ್ ಆಗಿಲ್ಲ. ಅಲ್ಲಿ ೩-೪ ವರ್ಷಗಳಿಂದ ಪಂಪ್‌ಸೆಟ್ ಖರೀದಿ ಮಾಡಿರುವುದು ಇದೆ. ಅಲ್ಲಿಗೆ ಲೈನ್ ಹಾಕುವ ವ್ಯವಸ್ಥೆಯನ್ನೂ ಮಾಡಿಲ್ಲ. ಇದರಿಂದ ಅನೇಕ ಜನರಿಗೆ ತೊಂದರೆಯಾಗಿದೆ. ಇದರ ಬಗ್ಗೆ ತಾವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಇದನ್ನು ಇಲಾಖೆಯಿಂದ ವಿಚಾರಣೆ ಮಾಡಿಸಿ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀ ಎಂ. ಪಿ. ಕೇಶವಮೂರ್ತಿ,-ಆಬ್ಸೆಂಟ್

ಶ್ರೀ ಎಂ. ವೀರಯ್ಯಸ್ವಾಮಿ. ಆಬ್ಸೆಂಟ್. ಮುಂದೆ ಅಲ್ಪಕಾಲಾವಧಿ ಪ್ರಶ್ನೆ.-

ಸದಸ್ಯರು.—ಆಬ್ಸೆಂಟ್.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಯಾದಗಿರಿ ತಾಲ್ಲೂಕಿನಲ್ಲಿ ಗ್ರಾಮೀಣ ವಿದ್ಯುದೀಕರಣ ಯೋಜನೆ

೧೬೫೪. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯಾದಗಿರಿ ತಾಲ್ಲೂಕಿನಲ್ಲಿ ಆರ್.ಇ.ಸಿ. ಕಾರ್ಯಕ್ರಮಕ್ಕಾಗಿ ಗುರುತಿಸಲ್ಪಟ್ಟ ಉಪ ಗ್ರಾಮಗಳು ತಾಂಡಾಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ತಾಲ್ಲೂಕಿನಲ್ಲಿ ತಾಂಡಾಗಳು, ಗ್ರಾಮಗಳು, ಉಪ ಗ್ರಾಮಗಳು ಮತ್ತು ಹರಿಜನ ವಾಡಗಳ ವಿದ್ಯುದೀಕರಣದ ಕಾರ್ಯ ನೆರವೇರಿಸಲು ಸರ್ಕಾರ ಕೈಗೊಂಡ ಕಾರ್ಯಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಯಾದಗಿರಿ ತಾಲ್ಲೂಕಿನಲ್ಲಿ ವಿದ್ಯುದೀಕರಣಕ್ಕೆ ೪೭ ತಾಂಡಾಗಳನ್ನು ಗುರುತಿಸಲಾಗಿದೆ. ಆರ್.ಇ.ಸಿ. ಕಾರ್ಯಕ್ರಮಕ್ಕೆ ಯಾವ ಉಪ ಗ್ರಾಮವನ್ನು ಗುರುತಿಸಿಲ್ಲ.

ಆ) ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ೧೦೦ ಹರಿಜನ ಬಸ್ತಿಗಳ ವಿದ್ಯುದೀಕರಣದ ಆರ್.ಇ.ಸಿ. ಯೋಜನೆ ಮಂಜೂರಾಗಿದ್ದು ಸದ್ಯದಲ್ಲಿಯೇ ಇದನ್ನು ಕೈಗೆತ್ತಿಕೊಳ್ಳಲಾಗುತ್ತದೆ.